# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ: 22/09/2021 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 11.11.2021 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ. | ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ | 9513322144 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂ.174 | 9480688174 |
| 3 | ಶ್ರೀ ಬಿ.ಎನ್.ಆರ್ ರೆಡ್ಡಿ | ಸದಸ್ಯರು | 9989000017 |
| 4 | ಶ್ರೀಮತಿ ಡಾ॥ ಶಾಂತಿ, | ಸದ್ಯಸರು | 9036047199 |
| 5 | ಶ್ರೀ ಸಿ.ಎಸ್. ದೇಶಮುಖ | 6ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 6 | ಶ್ರೀ ಜಿ.ಚಂದ್ರಶೇಖರ | 6ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 7 | ಶ್ರೀ ಟಿ. ನಾಗರಾಜ ರೆಡ್ಡಿ | 6ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 8 | ಶ್ರೀಮತಿ ಚಿತ್ರ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 9 | ಶ್ರೀಮತಿ ಜಯಂತಿ ಶ್ರೀಕಾಂತ್ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 10 | ಶ್ರೀಮತಿ ಆರತಿ | 2ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 11 | ಶ್ರೀಮತಿ ಪದ್ಮಶ್ರೀ ಮಹೇಶ್, | 7ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 12 | ಶ್ರೀ ಹನುಮಂತರಾಯ.ಟಿ | ಸ.ಕಾ.ಅ. (ಹೆಚ್.ಎಸ್.ಆರ್ ಉಪವಿಭಾಗ) | 9480688256 |
| 13 | ಶ್ರೀ ಚಂದ್ರಶೇಖರ | ತೋಟಗಾರಿಕೆ ಅಧೀಕ್ಷಕರು | 9845014293 |
| 14 | ಶ್ರೀ ಸಾಯಿಬಣ್ಣ | ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444039 |
| 15 | ಶ್ರೀ ಮಹೇಶ್ | ಪಿ.ಎಸ್.ಐ (ಹೆಚ್.ಎಸ್.ಆರ್ ಪೋಲಿಸ್ ಠಾಣೆ) | 9916591623 |
| 16 | ಶ್ರೀ ಯತೀಶ್ | ಸ.ಅ. ಎಸ್-20, ಬೆಸ್ಕಾಂ | 9449840476 |

(ಪು.ತಿ.ನೋ)

Scanned with

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 17 | ಶ್ರೀ ವಿನೋದ್.ಜಿ | ಹಿ.ಆ.ಪ ವಾರ್ಡ್ ಸಂ. 174 | 9844629911 |
| 18 | ಶ್ರೀ ಹರೀಶ್.ಹೆಚ್.ಆರ್ | ಅರಣ್ಯ ವಲಯ ಅಧಿಕಾರಿ | 9742612471 |
| 19 | ಶ್ರೀಮತಿ ಸತ್ಯವಾಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ: 174 | 8971434331 |
| 20 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |
| 21 | ಶ್ರೀ ರಾಜು | ಬೀದಿ ದೀಪ ನಿರ್ವಾಹಕರು | - |
| 22 | ಶ್ರೀ ಮಹೇಶ್ | ಬೀದಿ ದೀಪ ನಿರ್ವಾಹಕರು | 9986041663 |

- ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿದ್ದು, ಶ್ರೀ ರಮೇಶ್ ಸಹಾಯಕ ಅಭಿಯಂತರರು, ಬಿಬಿಎಂಪಿ ವಿದ್ಯುತ್ ರವರು ಸಭೆಗೆ ಗೈರು ಹಾಜರಾಗಿದ್ದು, ಇದಕ್ಕೆ ಎಲ್ಲಾ ಸದಸ್ಯರು ಆಕ್ಷೇಪಿಸಿ ಕ್ರಮ ಜರುಗಿಸುವಂತೆ ಕಾರಣ ಕೇಳಿ ನೋಟಿಸ್ ನೀಡಲು ಕೋರಿರುತ್ತಾರೆ. ಅದಕ್ಕೆ ಮುಂದಿನ ಸಭೆಗೆ ಗೈರುಹಾಜರಾಗದೆ ಕ್ರಮ ವಹಿಸುವುದೆಂದು ಸದಸ್ಯರುಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿ ಸಭೆಯನ್ನು ಮುಂದುವರೆಸಿದರು.

- **ಆರೋಗ್ಯ :-**

1. ವಾರ್ಡ್ ವ್ಯಾಪ್ತಿಯ ಕೆಫೆ-27 ಹತ್ತಿರ ಪಾದಚಾರಿ ಮಾರ್ಗದಲ್ಲಿ ವಾಣಿಜ್ಯ ವ್ಯಾಪಾರ ನಡೆಸುತ್ತಿದ್ದು, ಕೋವಿಡ್-19ರ ಮಾರ್ಗ ಸೂಚಿಗಳನ್ನು ಪಾಲಿಸದೆ ಉಲ್ಲಂಘನೆ ಮಾಡುತ್ತಿದ್ದು ಹಾಗೂ ವಾರ್ಡ್ ಪ್ರದೇಶಗಳಲ್ಲಿ ಜನ ಸಂದಣಿ ಹೆಚ್ಚಾಗಿದ್ದು, ಕೋವಿಡ್ ಸಕ್ರಿಯ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಇಂತಹದವರಿಗೆ ದಂಡ ವಿಧಿಸಿ ಕೋವಿಡ್-19ರ ಮಾರ್ಗ ಸೂಚಿಗಳನ್ನು ಪಾಲಿಸಲು ಅರಿವು ಮೂಡಿಸಲು ಹಾಗೂ ಪಾದಚಾರಿ ಮಾರ್ಗದಲ್ಲಿ ಮಳಿಗೆಯನ್ನು ತೆರವುಗೊಳಿಸಲು ಶ್ರೀ ಬಿ.ಎನ್.ಆರ್ ರೆಡ್ಡಿ ಡಾ|| ಶಾಂತಿ ಮತ್ತು ಕ್ಷೇಮಾಭಿವೃದ್ಧಿ ಮತ್ತು ವಾರ್ಡ್ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿನೋದ್ ಹಿರಿಯ ಆರೋಗ್ಯ ಪರಿವೀಕ್ಷಕರ ರವರು ಪಾದಚಾರಿ ಮಾರ್ಗದ ಮಳಿಗೆಯನ್ನು ತೆರವುಗೊಳಿಸುವ ಕಾರ್ಯಚರಣೆ ಸ.ಕಾ.ಅ. & ಪೋಲಿಸ್ ಇಲಾಖೆ ರವರೊಂದಿಗೆ ಜಂಟಿ ತಪಾಸಣೆ ಮಾಡಲಾಗುತ್ತಿದ್ದು, ಹಾಗೂ ಕೋವಿಡ್-19 ಮಾರ್ಗ ಸೂಚಿಗಳನ್ನು ಪಾಲಿಸದೆ ಉಲ್ಲಂಘನೆ ಮಾಡುತ್ತಿರುವವರಿಗೆ ವಾರ್ಡ್ ಮಾರ್ಷಲ್ ದಂಢ ವಿಧಿಸಲು ಸೂಚನೆ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **ತೋಟಗಾರಿಕೆ ಇಲಾಖೆ:**

1. ವಾರ್ಡ್ ವ್ಯಾಪ್ತಿಯ ಸೆಕ್ಟರ್‌ವಾರು ಒಟ್ಟು 32 ಉದ್ಯಾನವನಗಳು ಇದ್ದು ಈ ಉದ್ಯಾನವನಗಳಲ್ಲಿ ಒಣ ಎಲೆಗಳ ಮಿಶ್ರಗೊಬ್ಬರ ತೊಟ್ಟಿಗಳನ್ನು ನಿರ್ಮಿಸಲಾಗಿದ್ದು, ಸೆಕ್ಟರ್-1 ಮತ್ತು ಸೆಕ್ಟರ್-2 ತೊಟ್ಟಿಗಳಲ್ಲಿ ಒಣ ಎಲೆಗಳನ್ನು ರಾಶಿಗಳನ್ನು ಸಾರ್ವಜನಿಕರು & ಸ್ಥಳೀಯರ ಆವರಣದಲ್ಲಿ ಸಂಗ್ರಹಿಸಿದ ಒಣ ಎಲೆಗಳನ್ನು ಈ ತೊಟ್ಟಿಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಡಾ|| ಶಾಂತಿ, ಕ್ಷೇಮಾಭಿವೃದ್ಧಿ ಸಂಘ ರವರು ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿ ದೂರನ್ನು ನೀಡಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು ಬೊ.ವ. ರವರು ಸ್ಥಳ ಪರಿಶೀಲಿಸಿ ಕ್ರಮ ವಹಿಸಿ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಗೆ ಸೂಚಿಸಲಾಗುವುದೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ಗುತ್ತಿಗೆದಾರರನ್ನು ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಲು ಶ್ರೀ ಚಂದ್ರಶೇಖರ ತೋಗಾರಿಕೆ ಅಧೀಕ್ಷಕರು ಬೊ.ವ. ರವರಿಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಸೆಕ್ಟರ್‌ವಾರು ಉದ್ಯಾನವಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಪಡಿಸುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ ಶ್ರೀಮತಿ ಡಾ|| ಶಾಂತಿ ಸದಸ್ಯರು ಕ್ಷೇಮಾಭಿವೃದ್ಧಿ ಸಂಘ ಮತ್ತು ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು (ಬೊ.ವ.) ರವರು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

(ಪು.ತಿ.ನೋ)

Scanned with

3. ವಾರ್ಡ್ ವ್ಯಾಪ್ತಿಯ ಸೆಕ್ಟರ್‌ವಾರಿನ ಉದ್ಯಾನವಗಳಲ್ಲಿ ಭದ್ರತೆ ಸಿಬ್ಬಂದಿ ರವರು ಉದ್ಯಾನವಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಮತ್ತು ಸರಿಯಾದ ಸಮಯಕ್ಕೆ ಉದ್ಯಾನವನದ ನಿರ್ವಹಣೆ ಮಾಡುತ್ತಿಲ್ಲ ಮತ್ತು ಸರಿಯಾದ ಸಮಯಕ್ಕೆ ಉದ್ಯಾನವನದ ಗೇಟ್ ಅನ್ನು ಸಹ ತೆರಯುತ್ತಿಲ್ಲ ಮತ್ತು ಸ್ವಾಭೀಮಾನ ಉದ್ಯಾನವನದಲೇ ಒಟ್ಟು 6 ಭದ್ರತೆ ಸಿಬ್ಬಂದಿಯವರ ಕುಟುಂಬಗಳು ಕಾರ್ಯನಿರ್ವಹಸುತ್ತಿರುತ್ತಾರೆ ಎಂದು ಶ್ರೀ ಬಿ.ಎನ್.ಆರ್ ರೆಡ್ಡಿ, ಡಾ|| ಶಾಂತಿ ಸದಸ್ಯರು ಕ್ಷೇಮಾಭಿವೃದ್ದಿ ಸಂಘ ರವರು ವಾರ್ಡ್ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು ಬೊ.ವ. ರವರು ಭದ್ರತೆ ಸಿಬ್ಬಂದಿಗಳನ್ನು ಒದಗಿಸಲಾಗುವುದೆಂದು ಹಾಗೂ ಸ್ವಾಭೀಮಾನ ಉದ್ಯಾನವನಕ್ಕೆ 09 ಭದ್ರತೆ ಸಿಬ್ಬಂದಿ ನಿಯೋಜಿಸಬೇಕಾಗಿರುವುದರಿಂದ ಸದರಿ ಭದ್ರತೆ ಕಾರ್ಯನಿರ್ವಹಿಸುತ್ತಿದ್ದರೆ ಎಂದು ಸಭೆಯಲ್ಲಿ ತಿಳಿಸಿದರು.

- <u>ಬೆಸ್ಕಾಂ:</u>

1. ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆಯಿಂದ ತಂತಿಗಳನ್ನು ಸೆಕ್ಟರ್‌ವಾರು ಅಳವಡಿಸಿದ್ದು, ಸದರಿ ತಂತಿಗಳ ಅವಶೇಷಗಳು ಹಾಗೂ ಉಳಿದಿರುವ ತಂತಿಗಳು ಬಿಟ್ಟಿದ್ದು, ಇದರಿಂದ ಸಾರ್ವಜನಿಕರು & ಸ್ಥಳೀಯರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಶ್ರೀಘ್ರದಲೇ ಸದರಿ ತಂತಿಗಳು ಹಾಗೂ ಅವಶೇಷಗಳನ್ನು ತೆರವುಗೊಳಿಸಲು ಶ್ರೀ ಬಿ.ಎನ್.ಆರ್ ರೆಡ್ಡಿ ಡಾ|| ಶಾಂತಿ ಸದಸ್ಯರು ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ದೂರು ನೀಡಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಯತೀಶ್ ಸ..ಅ ರವರು ಶ್ರೀಘ್ರದಲ್ಲಿ ತೆರವುಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಖಾಲಿ ನಿವೇಶನಗಲ್ಲಿ ಬೆಸ್ಕಾಂ ಇಲಾಖೆ ರವರು ಟ್ರಾನ್ಸ್‌ಫಾರ್ಮರ್ (ವಿದ್ಯುತ್ ಪರಿವರ್ತಕ)ವನ್ನು ಖಾಲಿ ನಿವೇಶನದ ಮಧ್ಯ ಭಾಗದಲ್ಲಿ ಅಳವಡಿಸಿದ್ದು, ಇದನ್ನು ಪರಿಶೀಲಿಸಿ ವಿದ್ಯುತ್ ಪರಿವರ್ತಕ ಮಧ್ಯ ಭಾಗದಲ್ಲಿ ಅಳವಡಿಸಿದ್ದು, ಇದನ್ನು ಪರಿಶೀಲಿಸಿ ವಿದ್ಯುತ್ ಪರಿವರ್ತಕ ವನ್ನು ಬೇರೆ ಕಡೆ ಸ್ಥಳಾಂತರಿಸಲು ಡಾ|| ಶಾಂತಿ ಸದಸ್ಯರು & ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯ ಗಮನಕ್ಕೆ ತಂದಿದು. ಈ ಬಗ್ಗೆ ಶ್ರೀ ಯತೀಶ್ ರವರು ಮೇಲ್ಧಾಕಾರಿಗಳ ಗಮನಕ್ಕೆ ತಂದ್ದು, ಸ್ಥಳಾಂತರಿಸಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- <u>ಪೋಲಿಸ್ ಇಲಾಖೆ:-</u>

   1. ಹೆಚ್.ಎಸ್.ಆರ್ ಬಡಾವಣೆಯಲ್ಲಿ ಚೈನ್ ಸ್ನ್ಯಾಚಿಂಗ್ ಮೊಬೈಲ್ ಸ್ನ್ಯಾಚಿಂಗ್ ಹೆಚ್ಚಾಗುತ್ತಿದ್ದು, ವಾರ್ಡ್‌ನಲ್ಲಿ ಪೆಟ್ರೋಲಿಂಗ್ ಮಾಡುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ ಸದಸ್ಯರು ಮತ್ತು ಇತರೆ ಸದಸ್ಯರು ವಾರ್ಡ್ ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಭೆಗೆ ಪೋಲಿಸ್ ಇನ್ಸ್‌ಪೆಕ್ಟರ್ ರವರ ಪರವಾಗಿ ಹಾಜರಿದ್ದ ಶ್ರೀ ಮಹೇಶ್ ಇನ್ಸ್‌ಪೆಕ್ಟರ್ ರವರ ಪರವಾಗಿ ಹಾಜರಿದ್ದ ಶ್ರೀ ಮಹೇಶ್ ಪಿ.ಎಸ್.ಐ ರವರು ಈಗಾಗಲೇ ಪೆಟ್ರೋಲಿಂಗ್ ಮಾಡಲಾಗುತ್ತಿದ್ದು, ಹೆಚ್ಚು ಸಿಬ್ಬಂದಿ ನಿಯೋಜಿಸಿ ಪೆಟ್ರೋಲಿಂಗ್ ಮಾಡಲು ಪೋಲಿಸ್ ಇನ್ಸ್‌ಪೆಕ್ಟರ್ ರವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
   2. ಹೆಚ್.ಎಸ್.ಆರ್ ಬಡಾವಣೆ ಸೆಕ್ಟರ್-6 ನಲ್ಲಿ ಮಂಗಮ್ಮನಪಾಳ್ಯ ಕ್ರಾಸ್‌ನಲ್ಲಿ, ಅಗರ ಕ್ರಾಸ್‌ನಲ್ಲಿ ಮತ್ತು 2ನೇ ಸೆಕ್ಟರ್ ಕ್ರಾಸ್‌ನಲ್ಲಿ ಚೆಕ್ಕ್‌ಪೋಸ್ಟ್ ನಿರ್ಮಿಸಿ 04 ಕಡೆ ನಾಕಬಂದಿ ಹಾಕುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ ಸದಸ್ಯರು & ಇತರೆ ಸದಸ್ಯರು ಕ್ಷೇಮಾಭಿವೃದ್ಧಿ ಸಂಘದವರು ಸಭೆಯಲ್ಲಿ ಚರ್ಚಿಸಿದ್ದು, ಈ ಬಗ್ಗೆ ಶ್ರೀ ಮಹೇಶ್ ಪಿ.ಎಸ್.ಐ ರವರು ಪೋಲಿಸ್ ಇನ್ಸ್‌ಪೆಕ್ಟರ್ ರವರೊಂದಿಗೆ ಚರ್ಚಿಸಿ ಕ್ರಮ ಕೈಗೊಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

<u>ಕಾಮಗಾರಿ ಇಲಾಖೆ</u> :-

1. ಹೆಚ್.ಎಸ್.ಆರ್ ವಾರ್ಡ್ ವ್ಯಾಪ್ತಿಯ ರಸ್ತೆ ಗುಂಡಿಗಳು ಮುಚ್ಚುವಂತೆ ಮತ್ತು ಶೋಲ್ಡರ್ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ ಮತ್ತು ಡಾ|| ಶಾಂತಿ, ಸದಸ್ಯರು ವಾರ್ಡ್ ಸಭೆಯ ಗಮನಕ್ಕೆ ತಂದಿದ್ದು, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ಈಗಾಗಲೇ ರಸ್ತೆ ಗುಂಡಿಗಳನ್ನು ಮುಚ್ಚಲು ವೆಟ್‌ಮಿಕ್ಸ್ ಹಾಕಿದ್ದು, ಇನ್ನೂ ಕೆಲವು ದಿನಗಳ ನಂತರ ಡಾಂಬರೀಕರಣ ಮಾಡಲಾಗುವುದು ಹಾಗೂ ಶೋಲ್ಡರ್ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

Scanned with

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು, (ಮಹಾದೇವಪ್ಪುರ ವಲಯ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಜಂಟಿ ಆಯುಕ್ತರು, ಮಹಾದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with